■ ಚಿತ್ರ-ಬರಹ: ವಿಘ್ನೇಶ್ವರ ಹೇರಳೆ

# ಗಂಜಾಂ ತೋಟದಲ್ಲಿ ನಾವು..







ಅದು ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಮತ್ತಿತರ ಲಲಿತಕಲೆಗಳಲ್ಲಿ ತೊಡಗಿಕೊಂಡು ಸಾಧನೆಯ ಹಾದಿಯಲ್ಲಿದ್ದ, ಸಮಾನ ಮನಸ್ಕ ಸ್ನೇಹಿತರಾದ ನಾವೆಲ್ಲ ಸೇರಿ 'ಪರಸ್ಪರ' ಎಂಬ ಸಾಂಸ್ಕೃತಿಕ ಸಂಸ್ಥೆಯೊಂದನ್ನು ಪ್ರಾರಂಭಿಸಿ ಮುನ್ನಡೆಸುತ್ತಿದ್ದ ಕಾಲ!

ಸಾಹಿತಿ ಚುಕ್ಕಿಚಿತ್ರ ಕಲಾವಿದ ಮೋಹನ್ ವೆರ್ಣೇಕರ್, ಬೆಂಗಳೂರು ಇತಿಹಾಸ ಸಂಶೋಧಕ, ಲೇಖಕ ಸುರೇಶ ಮೂನ, ಲೇಖಕ ಮುಕುಂದ ಪುರೋಹಿತ್, ಚಿತ್ರ ಕಲಾವಿದ ಬಿ. ಕೆ. ಶ್ರೀನಿವಾಸ ವರ್ಮ, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಾಹಿತಿ ನೀಲಾವರ ಸುರೇಂದ್ರ ಅಡಿಗ, ವ್ಯಂಗ್ಯಚಿತ್ರಕಾರ ಸು.ವಿ. ಮೂರ್ತಿ, ಚಿತ್ರ ನಾಟಕ ಕಲಾವಿದೆ ಉಮಾ ಗಂಜಾಂ, ಲಘು ಸಂಗೀತಗಾರ, ನಾಟಕಕಾರ ಹಿರಿಯೂರು ಸತ್ಯನಾರಾಯಣ ಮತ್ತು ಆಗಾಗ ಲೇಖನಗಳನ್ನು ಬರೆಯುತ್ತಿದ್ದ ನಾನು ಸಂಸ್ಥೆಯನ್ನು ನಡೆಸುತ್ತಿದ್ದೆವು. ಈ ಕ್ಷೇತ್ರಗಳ ಅನೇಕ ಪ್ರತಿಭಾನ್ವಿತರು, ಆಸಕ್ತರು ಸಂಸ್ಥೆಯ ಸದಸ್ಯರಾಗಿದ್ದರು. ಸುಪ್ರಸಿದ್ಧ ಕವಿ ಸಾಹಿತಿಗಳು, ಸಂಗೀತಗಾರರು, ನೃತ್ಯ ಕಲಾವಿದರು, ನಾಟಕಕಾರರು, ಚಿತ್ರಕಲಾವಿದರು ಮುಂತಾದವರನ್ನು ಆಹ್ವಾನಿಸಿ ವೈವಿಧ್ಯಮಯ, ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೆವು. 'ಪರಸ್ಪರ'ದ ಕಾರ್ಯಕ್ರಮಗಳು ಎಲ್ಲರ ಪ್ರಶಂಸೆಗೆ ಪಾತ್ರವಾಗಿದ್ದವು.

ಸುಮಾರು ಮೂವತ್ತು ವರ್ಷಗಳ ಹಿಂದೆ ಅದೊಂದು ದಿನ, ಬೆಂಗಳೂರಿನ ಸಮೀಪದ ಗಂಜಾಂ ಎಸ್ಟೇಟ್‌ಗೆ ಒಂದು ದಿನದ ಪ್ರವಾಸ ಹೊರಟಿದ್ದೆವು. ಅಲ್ಲಿ 'ಪರಸ್ಪರ'ದ ಸದಸ್ಯರಿಂದ 'ಸಾಮೂಹಿಕ ಸಾಹಿತ್ಯ ರಚನೆ'ಎಂಬ ವಿನೂತನ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದೆವು. ನಾವು ಕೆಲವರು ಮುಖ್ಯರಸ್ತೆಯಿಂದ ಎಸ್ಟೇಟ್ ವರೆಗಿನ ಮಣ್ಣಿನ ರಸ್ತೆಯಲ್ಲಿ ಹರಟುತ್ತ ನಡೆದಿದ್ದೆವು. ಹೀಗೇ ಸಾಗುತ್ತಿದ್ದಾಗ ಒಂದೆಡೆ ರಸ್ತೆಯಲ್ಲಿ ಹುತ್ತದ ಮಣ್ಣು ಪ್ರತ್ಯಕ್ಷವಾಯಿತು. ಹಿಂದಿನ ರಾತ್ರಿ ಮಳೆ ಬಂದು ಹುತ್ತವೆಲ್ಲ ಮೆತ್ತಗಾಗಿ, ಮಣ್ಣೆಲ್ಲ ಒದ್ದೆಮುದ್ದೆಯಾಗಿ ಬಿದ್ದಿತ್ತು.

ಯಾವುದೇ ವಸ್ತುವಿನಲ್ಲಿ ಕಲೆಯನ್ನು ಕಾಣುವ, 'ಪರಿಸರ ಕಲಾವಿದ' ಬಿ. ಕೆ. ಶ್ರೀನಿವಾಸ ವರ್ಮ ಅವರಿಗೆ ಆ ಒದ್ದೆ ಮಣ್ಣಿನಲ್ಲಿ ಏನೋ ಕಲೆ ಕಂಡಿತು; ಮನದಲ್ಲಿ ಕಲಾಕೃತಿ ರೂಪುಗೊಂಡಿತು! ಕೂಡಲೇ ಕಾರ್ಯಪ್ರವೃತ್ತರಾದರು. ನೋಡು ನೋಡುತ್ತಿದ್ದಂತೆ ಹಸಿ ಮಣ್ಣಿನಲ್ಲಿ ಆಕೃತಿಯೊಂದು ಅರಳಿತು! 'ಬುದ್ಧನ ತಲೆ' ಅಲ್ಲಿ ಪಡಿಮೂಡಿತ್ತು! ವರ್ಮ ಅವರ ಕಲಾಕೌಶಲ್ಯದಿಂದ ಕೆಲವೇ ನಿಮಿಷಗಳಲ್ಲಿ ಉದ್ಭವಿಸಿದ್ದ ಬುದ್ಧ ಎಲ್ಲರಿಗೂ ಅಚ್ಚರಿ ಮೂಡಿಸಿದ್ದ, ಸಂತಸ ನೀಡಿದ್ದ, ಎಲ್ಲರನ್ನೂ ಆಕರ್ಷಿಸಿದ್ದ. ಕೆಲವರು ವರ್ಮ ಅವರಿಗೆ ಬುದ್ಧನನ್ನು ಮೂಡಿಸಲು ಅಲ್ಲಿಂದ ಇಲ್ಲಿಂದ ನೀರು ತಂದು ಒದಗಿಸಿದರೆ, ಇನ್ನು ಕೆಲವರು ಬುದ್ಧನ ತಲೆಯ ಮೇಲಿಡಲು ಬೇಲಿ ಮೇಲಿನ ಹೂಗಳನ್ನು ಆಯ್ದು ತಂದರು. ಕಾಕತಾಳೀಯವೆಂಬಂತೆ ಅಂದು ಬುದ್ಧಪೂರ್ಣಿಮೆಯಾಗಿತ್ತು! ಆದರೆ ಬುದ್ಧಪೂರ್ಣಿಮೆ ಎಂದು ನಮಗೆ 'ಜ್ಞಾನೋದಯ'ವಾಗಿದ್ದು ಮಾತ್ರ ಬುದ್ಧ ಮೇಲೆದ್ದ ಮೇಲೆಯೇ. ಅಂದು ಜಗವೆಲ್ಲ ಮಲಗಿರಲು ಆ ಬುದ್ಧನೆದ್ದ ಜ್ಞಾನವನ್ನು ಅರಸಲು! ಇಂದು ಜಗವೆಲ್ಲ ಎದ್ದಿರಲು ಜನರ ಎದುರಿನಲ್ಲೇ ಈ ಬುದ್ಧನೆದ್ದ ಸಂತಸವನು ಹಂಚಲು!

ಆದರೆ, ಬೇಸರದ ಸಂಗತಿಯೂ ಒಂದು ನಡೆಯಿತು. ಬುದ್ಧನನ್ನು ಅಲ್ಲೇ ಬೀದಿಯಲ್ಲಿ ಬಿಟ್ಟು ಮುಂದೆ ಸಾಗಿದ್ದ ನಮಗೆ ಸಂಜೆ ಮರಳಿ ಮನೆಗೆ ಬರುವಾಗ ಕಂಡದ್ದು ಯಾರೋ ದಾರಿಹೋಕರ ದಾಳಿಗೆ ತುತ್ತಾಗಿ ಮತ್ತೆ ಮಣ್ಣಿನ ಮುದ್ದೆಯಾಗಿ ಬಿದ್ದಿದ್ದ ಬುದ್ಧ. ಇದು 'ಹುಟ್ಟು ಸಾವು ಮಣ್ಣಲ್ಲೇ', 'ಮಣ್ಣಿಂದ ಕಾಯ ಮಣ್ಣಿಂದ' ಎಂಬುದನ್ನೆಲ್ಲ ಸಾಂಕೇತಿಕವಾಗಿ ಸಾರುವಂತಿತ್ತು!

ಬೆಳಗು–ಬೈಗಿನ ಈ ಘಟನೆಗಳ ನಡುವೆ ನಾವು ಪ್ರಕೃತಿ ಸೌಂದರ್ಯದಿಂದ ಕೂಡಿದ ಗಂಜಾಂ ಎಸ್ಟೇಟ್‌ನಲ್ಲಿ ಸ್ವಚ್ಛಂದವಾಗಿ ವಿಹರಿಸಿದೆವು. ನಿಗದಿತ ಕಾರ್ಯಕ್ರಮದಂತೆ ಸುಂದರ ಪ್ರಕೃತಿಯ ನಡುವೆ ಸಾಮೂಹಿಕ ಸಾಹಿತ್ಯ ರಚನೆ ಮಾಡಿದೆವು. ಕೆಲವರು ಕಥೆ, ಕವನ, ಹನಿಗವನ, ಲೇಖನ ಬರೆದರೆ, ಕೆಲವರು ಕಾದಂಬರಿ, ನಾಟಕ ರಚನೆಗೆ ಹಂದರ ಸಿದ್ಧಪಡಿಸಿಕೊಂಡು ಶುರುವಿಟ್ಟುಕೊಂಡರು. ಉಮಾ ಗಂಜಾಂ ಅವರು ರುಚಿಕರವಾಗಿ ತಯಾರಿಸಿದ ರಾಗಿ ಮುದ್ದೆ, ಸಾರು ಸಹಿತವಾದ ಸಿಹಿಯೂಟದ ಬಳಿಕ ಪ್ರಕೃತಿಯ ನಡುವೆ ಸೃಷ್ಟಿಯಾದ ಸ್ವರಚಿತ ಸಾಹಿತ್ಯ ರಚನೆಗಳನ್ನು ಪ್ರಸ್ತುತಪಡಿಸಿದೆವು. ವಿಶಿಷ್ಟ ಅನುಭವವನ್ನು ಮೆಲುಕುತ್ತ ಸಂಜೆ ಮರಳಿ ಬೆಂಗಳೂರಿನತ್ತ ಮುಖ ಮಾಡಿದೆವು.

ನನಗಂತೂ ಹಲವು ಸಾಧಕರ ಜೊತೆ ಕಳೆದ ಆ ದಿನ ನಿಜಕ್ಕೂ ಮರೆಯಲಾಗದ ದಿನ. ಅಂತಹ ಇನ್ನೂ ಅನೇಕ ಸಂದರ್ಭಗಳನ್ನು ಅವರೊಂದಿಗೆ ಕಳೆಯುವ, ಬೆರೆಯುವ ಸೌಭಾಗ್ಯ ನನ್ನದಾಗಿತ್ತು. ಓಹ್...! ಆ ಸುಂದರ ನೆನಪುಗಳು ಸದಾ ಹಸುರು ಹಸುರು! ■